ಬೆಳಗಾವಿ ವರದಿ
ಗುರುವಾರ 09-12-2021

# ಸೌರ ಶಕ್ತಿ ಸದ್ಬಳಿಕೆ ಮಾಡಿಕೊಂಡ ಕಣಕುಂಬಿ ಪ್ರಾಥಮಿಕ ಆರೋಗ್ಯ ಕೇಂದ್ರ



ಸೂರ್ಯನ ಬೆಳಕಿನ ಮಹತ್ವ ಅರಿತು ಅದನ್ನು ಸದುಪಯೋಗ ಪಡಿಸಿಕೊಂಡರೆ ಹಲವಾರು ಸಮಸ್ಯಗಳಿಗೆ ನಾವು ಪರಿಹಾರ ಕಂಡುಕೊಂಡತೆ ಆಗುತ್ತದೆ. ಎಂದು ಜರ್ಮನ್ ದೇಶದ ಎನರ್ಜಿ ಕ್ಲಸ್ಟರ್ ಹೆಡ್ .ಜಿ ಆಯ್ ಝುಡ್ ಡಾ/ ಏನ್ ಪ್ರೈಡ್ ಡ್ಯಾಮ್ ಅಭಿಪ್ರಾಯ ಪಟ್ಟರು

ಇವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಖಾನಾಪೂರ ತಾಲೂಕ ಕಣಕುಂಬಿ ಪ್ರಾಥಮಿಕ ಆರೋಗ್ಯ ಕೇಂದ್ರ, .ಜಿ ಆಯ್ ಝುಡ್, ಸೆಲ್ಕೋ ಸೋಲಾರ್ ಲೈಟಿ ಪ್ರಾವೆಟ್ ಲಿಮಿಟೆಡ್ .ಯುನೈಟೈಡ್ ಸಮಾಜ ಕಲ್ಯಾಣ ಸಂಸ್ಥೆ ಬೆಳಗಾವಿ ಇವರ ಆಶ್ರಯದಲ್ಲಿ ಹಮ್ಮಿಕೊಂಡ ಸೌರ ಶಕ್ತಿ ಘಟಕ ಹಾಗೂ ವೈದ್ಯಕೀಯ ಉಪಕರಣ ಲೋಕಾರ್ಪಣೆ ಬಧವಾರ 08 ರಂದು ಕಣಕುಂಬಿ ಪ್ರಾಥಮಿಕ ಆರೋಗ್ಯ ಕೇಂದ್ರ ಸಭಾಂಗಣದಲ್ಲಿ ಸಭಾಂಗಣದಲ್ಲಿ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿ ಜಿ.ಆಯ್ ಝುಡ್ ಇವರ ಸಹಕಾರದೊಂದಿಗೆ ಸೆಲ್ಕೋ ಸಂಸ್ಥೆ ದೇಶದ ವಿದ್ಯುತ್ ವಂಚಿತ ಗ್ರಾಮಗಳಿಗೆ ಸೂರ್ಯ ಶಕ್ತಿ ಸದ್ಬಳಿಕೆ ಮಾಡಿಕೊಂಡು ವಿದ್ಯುತ್ ಸರಬರಾಜು ಮಾಡುತ್ತಿರುವುದು ತುಂಬಾ ಸಂತಸ ತಂದಿದೆ. ಸಂಸ್ಥೆಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ನನ್ನನ್ನು ಆತ್ಮೀಯವಾಗಿ ಸ್ವಾಗತಿಸಿ ಗೌರವ ನೀಡಿದಕ್ಕೆ ನಿಮ್ಮೆಲ್ಲರಿಗೂ ಕೃತಜ್ಞತೆ ಸಮರ್ಪಿಸುತ್ತಿದ್ದನೆ. ಹಾಗೂ ಇಂತಹ ಕಡಿದಾದ ಕಾಡು ಪ್ರದೇಶದಲ್ಲಿ, ಮೂಲಭೂತ ಸೌಕರ್ಯ ಹೊಂದಿರದ ಗ್ರಾಮಗಳ ಜನರಿಗೆ 100% ಕೋವಿಡ್ ಲಸಿಕೆ ಹಾಕಿರುವುದಯ ದೊಡ್ಡ ಸಾಧನೆ ಆಗಿದೆ. ಹಾಗೂ ಇಂತಹ ಗ್ರಾಮೀಣ ಕುಟುಂಬಗಳಿಗೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಮ್ಮ ಸಂಸ್ಥೆ ಸೋಲಾರ್ ಶಕ್ತಿಯನ್ನು ನೀಡಲು ಸದಾ ಸಿದ್ಧವಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ನಿಧಿ ಸರೀನ್ ಯೋಜನಾ ವ್ಯವಸ್ಥಾಪಕರಾದ ಜಿ ಆಯ್ ಝುಡ್ ಇವರು ಮಾತನಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತುಂಬಾ ಉಪಯುಕ್ತವಾದ ಸೋಲಾರ್ ಘಟಕ ನಿರ್ಮಾಣ ಮಾಡಿ, ಇಂದು ಜನರಿಗೆ ಅದರ ಉಪಯೋಗವಾಗುವಂತೆ ಮಾಡಿದ್ದು ಮಹತ್ತರ ಕೆಲಸವಾಗಿದೆ. ನಿರತಂರವಾಗಿ ಮಳೆ ಬೀಳುವ ಈ ಪ್ರದೇಶದಲ್ಲಿ ವಿದ್ಯುತ್ ಸರಿಯಾಗಿ ಸರಬರಾಜು ಮಾಡುವುದು ಸವಾಲಿನ ಕೆಲಸ ಹೀಗಾಗಿ ಇಲ್ಲಿ ಸೋಲಾರ್ ಘಟಕ ಅಳವಡಿಸಲಾಗಿದ. ಇದರಿಂದ ಗ್ರಾಮೀಣ ಪ್ರದೇಶದ ಆರೋಗ್ಯ ಸುಧಾರಣೆಗೆ ಸಹಾಯಕವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಮೋಹನ ಹೆಗಡೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೆಲ್ಕೋ ಸೋಲಾರ್ ಲೈಟಿ ಪ್ರಾವೆಟ್ ಲಿಮಿಟೆಡ್ ಇವರು ಮಾತನಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕೆಲಸಕಾರ್ಯಗಳು ನಿರಂತರವಾಗಿ ಸಾಗಲು ನಮಗೆ ವಿದ್ಯುತ್ ಮುಖ್ಯ.

ಕಣಕುಂಬಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 6ಕಿಲೋ ವ್ಯಾಟ್ ಸಾಮರ್ಥ್ಯ ಸೋಲಾರ ಘಟಕವನ್ನು ಸ್ಥಾಪನೆ ಮಾಡಿದ್ದರಿಂದ ಇಲ್ಲಿ ಇನ್ನೂ ಮುಂದೆ ವಿದ್ಯುತ್ ಕೊರತೆ ಆಗದು.ಬೆಳಗಾವಿ ಜಿಲ್ಲೆಯ 3 ಪ್ರಾಥಮೀಕ ಆರೋಗ್ಯ ಕೇಂದ್ರಗಳಿಗೆ ಈ ಸೌಲಬ್ಯ ಒದಗಿಸಲಾಗಿದೆ ಎಂದರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಆರೋಗ್ಯಾಧಿಕಾರಿಗಳಾದ ಶಶಿಕಾಂತ ಮುನ್ಯಾಳ ಬೆಳಗಾವಿ ಇವರು ಮಾತನಾಡಿ ಕಣಕುಂಬಿ ಪ್ರಾಥಮೀಕ ಕೇಂದ್ರದ ಡಾ.ಚೇತನ್ ಹಾಗೂ ಅವರ ಸಿಬ್ಬಂದಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು. ಕೋವಿಡ್ ಸಂದರ್ಬದಲ್ಲಿ ಈ ಭಾಗದ ಎಲ್ಲಾ ಜನರಿಗೂ 100% ಲಸಿಕೆ ನೀಡಿ ಜಿಲ್ಲೆಗೆ ಮಾದರಿಯಾಗಿದ್ದಾರೆ.ಜೋತೆಗೆ ಸೆಲ್ಕೊ ಸಂಸ್ಥೆಯವರು ನಮ್ಮ ವಿದ್ಯುತ್ ತೊಂದರೆ ನಿಗಿಸಿದೆ. ಹೀಗೆ ಅತಿಹೆಚ್ಚು ಮಳೆ ಬೀಳುವ ಹಲವು ಪ್ರಾಥಮೀಕ ಕೇಂದ್ರ ಗಳಿಗೆ ಸಹಾಯ ಮಾಡಿ ಎಂದರು.

ಕಾರ್ಯಕ್ರಮದ ಮೊದಲಿಗೆ ಜರ್ಮನ್ ದೇಶದ ಡಾ/ ಏನ್ ಪ್ರೈಡ್ ಡ್ಯಾಮ್ ಹಾಗು ಎಲ್ಲಾ ಅಥಿತಿಗಳನ್ನು ವಾದ್ಯ ಮೇಳಗಳೊಂದಿಗೆ ಸ್ವಾಗತಿಸಲಾಯಿತು.ಸುಮಾರು 15 ಲಕ್ಷ ಮೌಲ್ಯದ ಸೋಲಾರ್ ಘಟಕ ಹಾಗು ವೈದ್ಯಕೀಯ ಉಪಕರಣಗಳನ್ನು ಮಾನ್ಯ ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ಕಣಕುಂಬಿ ಪಾಥಮೀಕ ಕೇಂದ್ರದ ವೈದ್ಯಾದಿಕಾರಿಗಳಾದ ಡಾ.ಚೇತನ್ ಇವರಿಗೆ ಹಸ್ತಾಂತರಿಸಲಾಯಿತು. ಕಾರ್ಯಕ್ರಮದಲ್ಲಿ ಯುನೈಟೈಡ್ ಸಮಾಜ ಕಲ್ಯಾಣ ಸಂಸ್ಥೆ ಬೆಳಗಾವಿಯ ಅಧ್ಯಕ್ಷರಾದ ಬಿ ಓ ತಿಪ್ಪೆಸ್ವಾಮಿ.ಕಣಕುಂಬಿ ಗ್ರಾಮ ಪಂಚಾಯತಿ ಅಧ್ಯಕ್ಷರು, ತಾಲೂಕು ಪಂಚಾಯತಿ ಸದಸ್ಯರು, ಗ್ರಾಮದ ಹಿರಿಯರು, ಆಶಾ.ಅಂಗನವಾಡಿ ಕಾರ್ಯಕರ್ತರು.ಶಾಲಾ ಮಕ್ಕಳು , ಪ್ರಾಥಮಿಕ ಕೇಂದ್ರದ ಸಿಬ್ಬಂದಿ, ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಡಾ.ಚೇತನ್ ವೈದ್ಯಾದಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಕಣಕುಂಬಿ ಸ್ವಾಗತಿಸಿದರು. ಸೆಲ್ಕೋ ಸೋಲಾರ್ ಲೈಟಿ ಪ್ರಾವೆಟ್ ಲಿಮಿಟೆಡ್‌ನ ಜಿಲ್ಲಾ ಸಂಯೋಜಕರು ವಂದಿಸಿದರು.